Mr. SPEAKER.—The question is—

"That the Special Motion re. Delimitation of Constituencies, as amended, * be passed."

The motion was adopted.

Mr. SPEAKER—The House will now rise for Lunch and meet again at 4-10 p.m.

The Assembly adjourned for Lunch at Forty Minutes past Three of the Clock and reassembled at Ten Minutes past Four of the Clock, Mr. Speaker (Sri V. Venkatappa) in the Chair.

STATEMENT LAID ON THE TABLE.

Recommendations of the House Committee.

Sri L. H. THIMMA BOI (Chairman of the House Committee).—Sir, I beg to lay on the Table the * recommendations of the House Committee for the Legislative Assembly adopted at its meetings held on 6th and 24th March 1950 and the action taken thereon.

Resolutions passed by the Library Committee.

Sri S. R. GURU (Member of the Library Committee).—Sir, at the request of the Chairman of the Library Committee, I beg to lay on the Table the * resolutions passed by the Library Committee of the Legislative Assembly at its meeting held on 1st August 1950 and the action taken thereon.

LEGISLATIVE BUSINESS

Bangalore Survey Bill, 1950.

Motion to withdraw.

Sri R. CHENNIGARAMIAH (Minister for Local Self-Government).—Sir, I beg to move for leave of this House to withdraw the Bangalore Survey Bill, as recommended by the Select Committee.

ಹಿಂದಿನ ಅಧಿವೇಶನದಲ್ಲಿ ಸರ್ವೆ ಬಿಲ್ಲನ್ನು ಸೆಲೆಕ್ಟ್ ಸಮಿತಿಗೆ ಕಳುಹಿಸಲಾಗಿತ್ತು. ಅವರು ಅದರ ಪ್ರತಿಯೊಂದು ಅಂಶವನ್ನೂ ಕೂಲಂಕಷವಾಗಿ ಪರಿಶೀಲಿಸಿ ಕೆಲವು ನ್ಯೂನತೆಗಳನ್ನು ಕಂಡುಹಿಡಿದರು. ಸರ್ಕಾರದ ವರು ಯಾವ ಉದ್ದೇಶದಿಂದ ಈ ಬಿಲ್ಲನ್ನು ತಂದಿದ್ದಾರೋ ಆ ಉದ್ದೇಶವು ಇದರ ಪ್ರಕಾರ ನೆರವೇರುವುದಿಲ್ಲ. ಆದ್ದರಿಂದ ಕೆಲವು ಬದಲಾವಣೆಗಳಿಂದ ಬೇರೆ ರೂಪವಾಗಿ ಬಿಲ್ಲನ್ನು ತರಬೇಕು. ಈಗಿರುವ ರೀತಿಯಲ್ಲಿ ಬಿಲ್ಲನ್ನು ತರುವುದು ಅಷ್ಟು ಸೂಕ್ತವಲ್ಲ. ಇದನ್ನು ವಾಪಸು ತೆಗೆದುಕೊಂಡರೆ ಅನುಕೂಲ ಎಂದು ಸಮಿತಿಯವರು ಅಭಿಪ್ರಾಯಪಟ್ಟರು. ಅದೇ ರೀತಿ ಅವರು ಶಿಫಾರ್ಸು ಮಾಡಿದ್ದಾರೆ. ನಾನೂ ಆ ಸಮಿತಿಯಲ್ಲಿದ್ದು ಅಭಿಪ್ರಾಯಗಳನ್ನೆಲ್ಲಾ ಪರಿಶೀಲಿಸಿದ್ದೇನೆ. ಮದ್ರಾಸಿನಲ್ಲಿರುವ ಸರ್ವೆ ಬಿಲ್ಲು ಸೂಕ್ತವಾಗಿದೆ. ಅದು ನಮ್ಮ ದೇಶಕ್ಕನುಗುಣವಾಗಿದೆ. ಅದರಿಂದ ಹೆಚ್ಚಿನ ಸಹಾಯವಾಗುತ್ತದೆಂದು ಗೊತ್ತಾಗಿದೆ. ಮೊನ್ನೆ ಮದ್ರಾಸಿಗೆ ಹೋಗಿದ್ದಾಗ ನಾನು ಅಲ್ಲಿನ ಬಿಲ್ಲನ್ನು ಓದಿನೋಡಲಾಗಿ ಅದು ಚೆನ್ನಾಗಿದೆಯೆಂಬ ಅಭಿಪ್ರಾಯ ಬಂತು. ಆ ಕಾರಣದಿಂದ ಸೆಲೆಕ್ಟ್ ಸಮಿತಿಯ ಶಿಫಾರ್ಸಿನ ಪ್ರಕಾರ ಈ ಸರ್ವೆ ಬಿಲ್ಲನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

Mr. SPEAKER.—Motion moved.—

"That leave be granted to withdraw the Bangalore Survey Bill, 1950, as recommended by the Select Committee."

(After a pause.)

Mr. SPEAKER.—The question is.—

"That leave be granted to withdraw the Bangalore Survey Bill, 1950, as recommended by the Select Committee".

The motion was adopted.

Report of the Committee of Privileges.

Sri A. BHEEMAPPA NAIK (Chitaldrug District—General).—Sir, I beg to move:

"That this House do approve of the recommendations made in the report of the Committee of Privileges presented to the House on 30th August 1950".

I have been asked by the Chairman of the Committee to make this motion on his behalf.

The Conference of Speakers held in 1949 decided that the State Legislatures should be asked to undertake a survey of the privileges of the State Legislatures, its members and committees. The Committee has examined in detail this question and has forwarded a note to the Speaker's Conference which was held recently. Any further action to be

---

*Copies placed in the Assembly Library.

taken on this matter may in the opinion of the Committee await the final decision of the Speakers' Conference. The Committee has therefore recommended that no further action need be taken in the matter and that the question may be again referred to the Committee of Privileges after the decision of the Speakers' Conference is received by our Legislature.

In this connection I want to state that there was a report made by the previous Legislative Council during the time when Sri D. H. Chandrasekharaiya was the President. That also may be taken into consideration after we receive the report, if any, from the Speakers' Conference. Therefore this is only an interim report and I move that it may be accepted.

Mr. SPEAKER.—Motion moved.—

"That this House do approve of the recommendations made in the Report of the Committee of Privileges presented to the House on 30th August 1950".

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಈ ಸಭೆಯ ಹಕ್ಕುಬಾಧ್ಯತೆಗಳ ವಿಚಾರವು ಹಿಂದಿನ ನ್ಯಾಯ ವಿಧಾಯಕ ಸಭೆಯಲ್ಲಿ ಬಹಳ ವಿಶದವಾಗಿ ಚರ್ಚೆಯಾಗಿದೆ. ಸಭೆಗೂ ಸಭೆಯಲ್ಲಿರತಕ್ಕಂಥ ಸದಸ್ಯರುಗಳಿಗೂ ಅಲ್ಲದೆ ಸಭಾಧ್ಯಕ್ಷರಿಗೂನೂಕ್ಕವಾದ ಹಕ್ಕುಬಾಧ್ಯತೆಗಳಿರುವುದು ಅವಶ್ಯಕ. ಈ ಹಕ್ಕುಬಾಧ್ಯತೆಗಳಿಗೆ ಯಾವಾಗಲಾದರೂ ಧಕ್ಕೆ ಬಂದರೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿರಬೇಕಾದುದು ಅಗತ್ಯ, ಈ ವಿಷಯಗಳನ್ನು ಯೋಚನೆಮಾಡಿ ನಲಹೆಗಳನ್ನು ಕೊಡಲು ಹಿಂದೆಯೇ ಒಂದು ಸಮಿತಿಯನ್ನು ನೇಮಕಮಾಡಲಾಗಿತ್ತು. ಆ ಸಮಿತಿಗೆ ಆಗ ನ್ಯಾಯ ವಿಧಾಯಕ ಸಭೆಯ ಅಧ್ಯಕ್ಷನಾಗಿದ್ದ ನಾನೇ ಅಧ್ಯಕ್ಷನಾಗಿದ್ದೆ. ಶ್ರೀ ಎ. ಭೀಮಪ್ಪನಾಯಕರೂ ಕೂಡ ಅದರಲ್ಲಿ ಒಬ್ಬ ಸದಸ್ಯರಾಗಿದ್ದರು. ಹೌಸ್ ಆಫ್ ಕಾಮನ್ಸ್ ಮುಂತಾದ ಸಭೆಗಳಲ್ಲಿ ಯಾವರೀತಿ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಂಡು ಬಂದಿರುತ್ತಾರೆಂಬುದನ್ನು ಬಹಳ ಕೂಲಂಕಷವಾಗಿ ಪರಿಶೀಲಿಸಿ ಸಮಿತಿಯು ಸರ್ವಾನುಮತದಿಂದ ತನ್ನ ವರದಿಯನ್ನು ತಯಾರು ಮಾಡಿರುತ್ತದೆ. ಈ ವರದಿಯಲ್ಲಿಯೇ ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟ ಒಂದು ಮಸೂದೆಯನ್ನು ಕೂಡ ತಯಾರಿಸಿ ಅಡಕಮಾಡಲಾಗಿದೆ. ಈ ವರದಿಯು ಲೆಜಿಸ್ಲೇಟಿವ್ ಆಫೀಸಿನಲ್ಲಿರಬಹುದು. ಅದರ ಪ್ರತಿಗಳನ್ನು ಮಾನ್ಯ ಸದಸ್ಯರುಗಳಿಗೆ ಹಂಚಬೇಕೆಂದು ನಾನು ಸೂಚಿಸಬಯಸುತ್ತೇನೆ. ಅದರಲ್ಲಿ ಸಭೆಯ, ಸಭಾ ಸದಸ್ಯರ ಮತ್ತು ಅಧ್ಯಕ್ಷರ ಹಕ್ಕು ಬಾಧ್ಯತೆಗಳೇನಿರಬೇಕು ಎಂದು ವಿಶದವಾಗಿ ಹೇಳಿದೆ. ಅಲ್ಲದೆ ಅಂಥ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬಂದರೆ ಯಾವ ರೂಪಗಳಲ್ಲಿ ಶಿಕ್ಷೆ ವಿಧಿಸಬಹುದೆಂದು ಹೇಳಿದೆ. Clause 24ರಲ್ಲಿ ಸಭಾಧ್ಯಕ್ಷರು admonition, censure, deprivation of vote, suspension, order for prosecution, ಈ ವಿಧಾನಗಳಿಂದ ಶಿಕ್ಷಿಸಬಹುದಾಗಿ ಸೂಚಿಸಿದೆ. ಅದೂ ಅಲ್ಲದೆ ಒಂದು ಪ್ರಕರಣದಲ್ಲಿ ಕಾರ್ಯಕ್ರಮ ಹೇಗಿರಬೇಕೆಂಬುದನ್ನು ನಮೂದಿಸಿದೆ. ಆ ವಿಷಯವು ಆಗಿನ ನ್ಯಾಯ ವಿಧಾಯಕ ಸಭೆಯಲ್ಲಿ ಕೂಡ ಚರ್ಚೆಯಾಗಿದೆ. ಖಾಸಗಿ ಸದಸ್ಯರಲ್ಲಿ ಒಬ್ಬರು ವಿನಾ ವಿುಕ್ಕವರೆಲ್ಲರೂ ಸಮಿತಿಯ ನಲಹೆಗಳಿಗೆ ಪೂರ್ಣ ಬೆಂಬಲವನ್ನಿತ್ತಿದ್ದಾರೆ. ಆದರೆ ದುರಾದೃಷ್ಟದಿಂದ ಆಗಿನ ಸರ್ಕಾರದ ಮನೋಭಾವ ಈ ವಿಚಾರದಲ್ಲಿ ಅಷ್ಟು ಉದಾರವಾಗಿರಲಿಲ್ಲ. ಆದುದರಿಂದ ಈ ವಿಷಯವನ್ನು ನಿಲ್ಲಿಸಬೇಕಾಯಿತು. ಇದು ಆಗಿ ಏಳು ವರ್ಷಗಳಾದುವು. ಈಗ ನಮ್ಮ ಭಾರತದ ರಾಜ್ಯಾಂಗದ ಪ್ರಕಾರ ಆಯಾ ಶಾಸನ ಸಭೆಗಳೇ ತಮ್ಮ ಹಕ್ಕುಬಾಧ್ಯತೆಗಳ ವಿಷಯವಾಗಿ ಕಾನೂನು ಮಾಡಲು ಪೂರ್ಣವಾಗಿ ಅಧಿಕಾರ ಹೊಂದಿವೆ. ಆದುದರಿಂದ ಈ ವಿಷಯವನ್ನು ಪುನರಾಲೋಚನೆ ಮಾಡಿ ನಮ್ಮ ಈ ಸಭೆಯ ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟಂತೆ ಒಂದು ನಿರ್ದಿಷ್ಟವಾದ ಕಾನೂನನ್ನು ಮಾಡುವುದು ಅಗತ್ಯವೆಂದು ನಾನು ಅಭಿಪ್ರಾಯಪಡುತ್ತೇನೆ. ರಾಜ್ಯಾಂಗದ ಪ್ರಕಾರ ಕಾರ್ಯವು ವಿಧಾಯಕವಾಗಿದೆ. ಅದರಂತೆ ಕಾರ್ಯಕ್ರಮ ನಡೆಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶಾಸನ ಸಭಾಧ್ಯಕ್ಷರುಗಳ ಸಮ್ಮೇಳನದಲ್ಲಿ ಈ ವಿಚಾರ ತೀರ್ಮಾನವಾದನಂತರ ಮುಂದಿನ ವರ್ಷಾಡು ಮಾಡುವುದಾಗಿ ಶ್ರೀ ಭೀಮಪ್ಪನಾಯಕರು ಹೇಳಿದರು. ಆದರೆ ಈಚೆಗೆ ವೃತ್ತಪತ್ರಿಕೆಗಳಲ್ಲಿ ಬಂದಿರುವ ವರ್ತಮಾನವನ್ನು ನೋಡಿದರೆ, ಇದಕ್ಕೆ ಕಾನೂನೇ ಬೇಕಾಗಿಲ್ಲವೆಂದು ಈ ಸಮ್ಮೇಳನದಲ್ಲಿ ತೀರ್ಮಾನಮಾಡಿದಂತೆ ಕಾಣುತ್ತದೆ. ಹೌಸ್ ಆಫ್ ಕಾಮನ್ಸ್ ಸಭೆಯ ಹಕ್ಕುಬಾಧ್ಯತೆಗಳನ್ನು ನಮ್ಮ ಸಭೆಯು ಪಡೆದಿದ್ದರೂ ನಾವು ಒಂದು ವಿಷಯವನ್ನು ಗಮನಿಸಬೇಕಾಗಿದೆ. ಇಂಗ್ಲೆಂಡಿನ ಸಭೆಯವರು ನೂರಾರು ವರ್ಷಗಳಿಂದ ಹೋರಾಟ ನಡೆಸಿ ತಮ್ಮ ಹಕ್ಕುಬಾಧ್ಯತೆಗಳ ವಿಷಯವಾಗಿ ನಿರ್ದಿಷ್ಟ ತೀರ್ಮಾನಗಳಿಗೆ ಬಂದಿದ್ದಾರೆ. ಈಗ ನಾವು ಇಲ್ಲಿ ಮಾಡಬೇಕಾದುದೇನೆಂದರೆ, ಅವರು ಯಾವ ಯಾವ ತೀರ್ಮಾನಗಳನ್ನು ಮಾಡಿಕೊಂಡಿದ್ದಾರೋ ಅವುಗಳನ್ನು ಆಧಾರವಾಗಿಟ್ಟುಕೊಂಡು ನಮ್ಮ ಹಕ್ಕುಬಾಧ್ಯತೆಗಳು ಹೇಗಿರಬೇಕೆಂಬುದನ್ನು ನಿರ್ಧರಮಾಡಿಕೊಳ್ಳಬೇಕಾಗಿದೆ.

Mr. SPEAKER.—The committee has also observed that in their view legislation is necessary.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಅದೇನೋ ಸರಿಯಾದುದೇ. ಆದರೆ ಶಾಸನ ಸಭಾಧ್ಯಕ್ಷರುಗಳ ಸಮ್ಮೇಳನದಲ್ಲಿ ಶಾಸನ ಸಭೆಯ ಹಕ್ಕುಬಾಧ್ಯತೆಗಳಿಗೆ ಕಾನೂನೇನೂ ಬೇಕಿಲ್ಲವೆಂದು ತೀರ್ಮಾನಿಸಿದ್ದರೆ ಅದರಂತೆ ನಡೆಯಬೇಕಾಗಿಲ್ಲವೆಂದು ನಾನು ಹೇಳಬಯಸುತ್ತೇನೆ. ತಮ್ಮ ವರದಿಯಲ್ಲಿ ಕಾನೂನು ಆಗಬೇಕೆಂದು ಹೇಳಿರುವಂತೆಯೇ ಒಂದು ಕಾನೂನನ್ನು ಅಷ್ಟು ಜಾಗ್ರತೆ ತಯಾರುಮಾಡಿಸಿ ಈ ಸಭೆಯ ಮುಂದಿಡಬೇಕೆಂದು ಸೂಚಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು.—ಸಮಿತಿಯ ಪರವಾಗಿ ಶ್ರೀ ಚಂದ್ರಶೇಖರಯ್ಯನವರಿಗೆ ಇಷ್ಟು ಹೇಳುತ್ತೇನೆ. ಪುನಃ ಈ ವಿಚಾರವನ್ನು ನಾವು ಪರಿಶೀಲನೆಮಾಡಲು ತೆಗೆದುಕೊಳ್ಳುತ್ತೇವೆ. ಸ್ಪೀಕರುಗಳ ಸಮ್ಮೇಳನದ ಅಭಿಪ್ರಾಯವೇನೇ ಇರಲಿ, ಇಲ್ಲಿ ಕಾನೂನು ಮಾಡುವುದು ಅಗತ್ಯವೆಂದು ಕಂಡರೆ ಸಭೆಯಮುಂದೆ

ಮಸೂದೆಯನ್ನು ತರುತ್ತೇವೆ. ಇಷ್ಟು ಹೇಳಿದಮೇಲೆ ಎಲ್ಲರೂ ಈ ಸೂಚನೆಯನ್ನು ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ.

Mr. SPEAKER.—The question is.—

"That this House do approves of the recommendations made in the report of the Committee of Privileges presented to the House on the 30th August 1950."

The motion was adopted.

Betting Tax (Second Amendment) Bill, 1950.

Motion to consider.

Sri H. C. DASAPPA (Minister for Finance and Industries).—Sir, I beg to move.

"That the Betting Tax (Second Amendment) Bill, 1950, be taken into consideration."

ಸ್ವಾಮಿ, ಈ ಮಸೂದೆಯ ವಿಚಾರದಲ್ಲಿ ನಾನು ಹೆಚ್ಚು ವಿವರಣೆ ಕೊಡಬೇಕಾದುದೇನೂ ಇಲ್ಲ. ಏಕೆಂದರೆ, ಈಗಿರುವ ಕಾನೂನಿಗೆ ಸ್ವಲ್ಪ ಬದಲಾವಣೆ ಮಾತ್ರ ಇದರಲ್ಲಿರುವ ವಿಷಯ. ಇದುವರೆಗೆ ಈ ಜೂಜಾಟದಮೇಲಿನ ತೆರಿಗೆಯನ್ನು ಹೇಗೆ ವಸೂಲು ಮಾಡುತ್ತಿದ್ದರೆಂದರೆ ಯಾರ್ಯಾರು ಜೂಜಿನಲ್ಲಿ ಗೆಲ್ಲುತ್ತಾರೋ ಆ ಮೊಬಲಗಿನಮೇಲೆ ಈ ತೆರಿಗೆಯನ್ನು ನಾವು ಗೊತ್ತುಮಾಡಿದ್ದ ದರದಲ್ಲಿ ಕೊಡುತ್ತಿದ್ದರು. ನಾವು ಇತ್ತೀಚೆಗೆ ಈ ತೆರಿಗೆ ದರವನ್ನು ಹೆಚ್ಚಿಸಿದ್ದೆವೆಂಬುದು ತಮಗೆ ಗೊತ್ತಿದೆ. ಮೊದಲು ಈ ತೆರಿಗೆ ಸೇಕಡ 4 ಇತ್ತು, ಆಮೇಲೆ 8 ಮಾಡಿದೆವು, ಆಮೇಲೆ $12\frac{1}{2}$ಗೆ ಹೆಚ್ಚಿಸಿದೆವು ಕೆಲವು ದಿನಗಳ ಹಿಂದೆ ಅದನ್ನು ಸೇಕಡ 25 ಮಾಡಿದೆವು. ಇನ್ನೆಲ್ಲಯೂ ಈ ತೆರಿಗೆ ಇಷ್ಟು ಹೆಚ್ಚಿನ ದರದಲ್ಲಿ ವಸೂಲಾಗುತ್ತಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಹೋದಸಾರಿ ಜೂಜು ಪ್ರಾರಂಭವಾದ ತರುಣದಲ್ಲೇ ಒಂದು ವಿಚಾರವನ್ನು ಕೆಲವರು ಹೇಳಿದರು. ಇಷ್ಟು ಹೆಚ್ಚಿನ ದರದಲ್ಲಿ ತೆರಿಗೆಯನ್ನಿಟ್ಟರೆ ಇದನ್ನು ಕೊಡಬೇಕಾದವರು ಯಾವುದಾದರೂ ಬೇರೆ ಕ್ರಮವನ್ನನುಸರಿಸಿ ಎಷ್ಟುಮಟ್ಟಿಗೆ ಸಾಧ್ಯವೋ ಅಷ್ಟುಮಟ್ಟಿಗೆ ತೆರಿಗೆಯನ್ನು ತಪ್ಪಿಸಿಕೊಳ್ಳಬಹುದೆಂದು ಸೂಚನೆಕೊಟ್ಟರು.

ಶ್ರೀ ಎಸ್. ಸಿದ್ದಪ್ಪನವರು.—ಹಿಂದೆ ಇದನ್ನು ನಾವೂ ಹೇಳಿದ್ದೆವು, ನೀವು ಕೇಳಲಿಲ್ಲ.

ಶ್ರೀ ಎಚ್. ಸಿ. ದಾಸಪ್ಪನವರು.—ತಾವು ಹೇಳತಕ್ಕ ಭವಿಷ್ಯವೆಲ್ಲ ಸರಿಯಾಗಿ ನಡೆದುಕೊಂಡು ಬಂದಿದೆ! ತಾವು ಜ್ಯೋತಿಷ್ಯವೃತ್ತಿಯನ್ನವಲಂಬಿಸಿದ್ದರೆ ಚೆನ್ನಾಗಿತ್ತು! (ನಗು!)

ಮೊದಲನೆಯ ಜೂಜಿನಲ್ಲೇ ಒಂದು ಅಂಶ ವ್ಯಕ್ತವಾಯಿತು. ಅದೇನೆಂದರೆ, ಅನೇಕರು private bettingನಲ್ಲಿ ಬುಕ್ ಮೇಕರುಗಳಿಗೆ ಸುಳ್ಳುಲೆಕ್ಕ ಕೊಡುವುದು ಅಥವಾ ಅವರಿಂದ ತಪ್ಪಿಸಿಕೊಂಡು ಜೂಜು ನಡೆಸುವುದು —ಹೀಗೆ ಪ್ರಾರಂಭವಾಯಿತು. ಇದನ್ನು ತಡೆಯಲು ನಾವು ಬೇರೆ ಮಾರ್ಗ ಅನುಸರಿಸಬೇಕಾಯಿತು.

ನಾವು ಈಗ ಹಾಕುತ್ತಿರುವ ಜೂಜಿನಮೇಲಿನ ತೆರಿಗೆಯನ್ನು ಜೂಜಿನಲ್ಲಿ ಗೆದ್ದವರಮೇಲೆ ಮಾತ್ರ ಹಾಕುವುದಲ್ಲ, ಯಾರು ಎಷ್ಟೆಷ್ಟು ಮೊಬಲಗನ್ನು ಜೂಜು ಕಟ್ಟುತ್ತಾರೋ ಒಟ್ಟು ಆ ಮೊಬಲಗಿನಮೇಲೆ ಹಾಕುವುದು. ಇದು ಧರ್ಮವಲ್ಲವೆಂದೂ, ಇದಕ್ಕೆ ಬೊಂಬಾಯಿನಲ್ಲಿ ಒಂದು ಕ್ರಮವನ್ನು ಅನುಸರಿಸಿದ್ದಾರೆಂದೂ ತಿಳಿದು ಅದರಂತೆ ನಾವು ಈ ಬದಲಾವಣೆ ಮಾಡಬೇಕಾಯಿತು. ಈ ತೆರಿಗೆಯನ್ನು ಬರೀ winning bets ಮೇಲೆ ವಿಧಿಸುವುದಲ್ಲ, amounts that they actually employ for the purpose of betting ಮೇಲೆ ವಿಧಿಸುವುದು. ಆದುದರಿಂದ ಈ ಕಾನೂನು ಬದಲಾವಣೆ ಮಾಡಬೇಕಾಯಿತು. ಹೀಗೆ ಒಟ್ಟು ಮೊಬಲಗಿನಮೇಲೆ ನಾವು ಸೇಕಡ 25ರಷ್ಟು ತೆರಿಗೆ ಹಾಕಿದರೆ ಬಹಳ ಹೆಚ್ಚಾಗುತ್ತದೆ. ಈ ಸೂಚನೆಯನ್ನು ಶ್ರೀ ಸಿದ್ದಪ್ಪನವರು ಆಗಲೇ ಹೇಳಿದ್ದರೆ ಈಗ ಅವರು ಹೇಳುವುದು ನಿಜವೆಂದು ಹೇಳಬಹುದಾಗಿತ್ತು. ಆದರೆ ಈ ಸೂಚನೆ ಆಗ ಅವರಿಂದ ಬರಲಿಲ್ಲ. ಹೋಗಲಿ. ಒಟ್ಟು ಜೂಜುಕಟ್ಟುವ ಮೊಬಲಗು ಗೆಲ್ಲುವ ಮೊಬಲಗಿಗಿಂತ ಯಾವಾಗಲೂ ಹೆಚ್ಚಾಗಿರುತ್ತದೆ. ಆದಕಾರಣ ತೆರಿಗೆಯ ದರವನ್ನು ಸೇಕಡ 25ಕ್ಕಿಂತ ಕಡಿಮೆಮಾಡಿದರೂ ಇದರಿಂದ ಬರುವ ವರಮಾನ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಆಗುತ್ತದೆ. ಅಲ್ಲದೆ ತೆರಿಗೆ ಕೊಡದೆ ತಪ್ಪಿಸಿಕೊಳ್ಳುವುದೂ ಕಡಿಮೆಯಾಗುತ್ತದೆ. ಆದಕಾರಣ ಈ ತಿದ್ದುಪಡಿಯನ್ನು ತರಬೇಕಾಗಿ ಬಂತು. ಈಗ ಇದನ್ನು ಮಸೂದೆಯ ರೂಪವಾಗಿ ತಮ್ಮ ಅನುಮತಿಗಾಗಿ ತಂದಿದೆ. ಇದಕ್ಕೆ ತಿದ್ದುಪಡಿಗಳಾವುವೂ ಬಂದಿಲ್ಲ. ಆದುದರಿಂದ ಹೆಚ್ಚು ಚರ್ಚೆಯಾಗಬೇಕಾದುದಿಲ್ಲವೆಂದು ಕಾಣುತ್ತದೆ.

Mr. SPEAKER.—Motion moved.—

"That the Betting Tax (Second Amendment) Bill, 1950, be taken into consideration."

Sri Kadidal MANJAPPA (Shimoga District—General).—On a point of information, Sir. It is clear from the Statement of Objects and Reasons that hitherto we were levying tax on all moneys paid or agreed to be paid by the licensed book-maker to a backer. Hereafter it is intended to levy the tax on the moneys paid by a backer to the book-maker. Here is my doubt. Hereafter, does not the backer earn some money on account of betting?

Sri H. C. DASAPPA.—Not all.

Rajamantrapravina H. B. GUNDAPPA GOWDA (Hassan District—General).—He makes some money.

Sri Kadidal MANJAPPA.—Then why should he go without being taxed?

Sri H. B. GUNDAPPA GOWDA.—You tax twice then?

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈಗ ಇದುವರೆಗೆ ಸೇಕಡ $17\frac{1}{2}$ಯಂತೆ ಹಾಕಲಾಗಿತ್ತೆಂದು ಹೇಳಿದಿರಿ; ಆಗ ಸುಮಾರು ಎಷ್ಟು ವರಮಾನ ಬಂದಿದೆ?